**ದಿನಾಂಕಃ 24-08-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಬಿ.ಜಿ.ಆರ್. ವಕೀಲರಿಂದಃ**

1 ನೇ ವಾದಿ ಕಮಲಮ್ಮ ಆರೋಗ್ಯವಾಗಿದ್ದಾರೆ ಎಂದರೆ ಆರೋಗ್ಯವಾಗಿದ್ದಾರೆ. ಕಮಲಮ್ಮರವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಕೊಡಲು ಏನೂ ತೊಂದರೆ ಇಲ್ಲ ಎಂದರೆ ಕೈ ಹಿಡಿದುಕೊಂಡು ನ್ಯಾಯಾಲಯಕ್ಕೆ ಕರೆದುಕೊಂಡು ಬರಬೇಕು. ಕಮಲಮ್ಮ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಮಲವ್ವರವರಿಗೆ ಇನ್ನೊಂದು ಹೆಸರು ಕಮಲಮ್ಮ ಎಂದು ಕರೆಯುತ್ತಾರೆ ಎಂದರೆ ನಿಜ. ನಾನು ವಾದ ಪತ್ರದಲ್ಲಿ ಸುಳ್ಳು ವಂಶಾವಳಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ವಾದಿ ಕಮಲಮ್ಮ ವೀರಾಚಾರಿಯ ಮಗಳು ಎಂದರೆ ನಿಜ.

2. ದಾವಾ ಆಸ್ತಿ ಶೆಡ್ಯೂಲ್ ಬ ಕ್ರಮ ಸಂಖ್ಯೆ 10 ಈ ಸ್ವತ್ತು ಲ್ಯಾಂಡ್ ಟ್ರಿಬ್ಯೂನಲ್ ರವರಿಂದ ಮಲ್ಲಪ್ಪ ಮತ್ತು ನಾಗಪ್ಪರವರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ನಮಗೂ ಹಿಸ್ಸೆ ಇದೆ ಎಂದು ಲ್ಯಾಂಡ್ ಟ್ರಿಬ್ಯೂನಲ್ ಗೆ ಅರ್ಜಿ ಕೊಟ್ಟಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಯಲ್ಲಿ ಹಿಸ್ಸೆ ಬೇಕು ಎಂದು ಯಾವಾಗ ಪ್ರತಿವಾದಿಯರನ್ನು ಕೇಳಿದ್ದೀರಾ ಎಂದರೆ ಕೇಳಿರುತ್ತೇವೆ ಆದರೆ ದಿನಾಂಕ ನೆನಪಿಲ್ಲ. ನಮ್ಮ ತಂದೆ ಬದುಕಿದ್ದಾಗಲೇ ನಾನು ಹಿಸ್ಸೆ ಕೇಳಿರುತ್ತೇನೆ. ದಾವಾ ಆಸ್ತಿಗಳಲ್ಲಿ ನಾನು ಮತ್ತು ನನ್ನ ತಾಯಿ ಯಾವತ್ತೂ ವಹಿವಾಟು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಪ್ರತಿವಾದಿಯರು ಮೂಲ ಪುರುಷನಿಗೆ ಯಾವುದೇ ರೀತಿಯ ಸಂಬಂದ ಇಲ್ಲದಿದ್ದರೂ ಸಹ ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೇಳಿ ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ.

3. ಈ ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ 3 ನೇ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ನಂ.54/2017 ರಂತೆ ದಾವೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಸದರಿ ದಾವೆಯ ಬಗ್ಗೆ ಸಂಪೂರ್ಣ ತಿಳುವಳಿಕೆ ಇದ್ದರೂ ಸಹ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ಮಿಸ್ ನಂ.5/2021 ರಂತೆ ಪ್ರಕರಣ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ಬೆಟ್ಟಪ್ಪನ ತಂಗಿ ಮಗಳ ಮಗ ಕೀರ್ತಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂ.54/2017 ರಂತೆ ದಾವೆ ಇದೆ ಎಂದರೆ ನನಗೆ ಗೊತ್ತಿಲ್ಲ.

4. ಮೇಲೆ ಹೇಳಿದ ಎಲ್ಲಾ ದಾವೆಗಳಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಸೇರಿಸಿಕೊಳ್ಳಿ ಎಂದು ಅರ್ಜಿ ಹಾಕಿದ್ದೀರಾ ಎಂದರೆ ಇಲ್ಲ. ನನಗೂ ಮತ್ತು ಮೂಲಪುರುಷ ಭರಮಪ್ಪನಿಗೂ ಯಾವುದೇ ಸಂಬಂದ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಬಿ.ಸಿದ್ದರಾಜು)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.